**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆ: 640 /2023**

**ಸಾಕ್ಷಿಯನ್ನು ದಿಃ 12.11.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**<u>ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ. JMS ವಕೀಲರಿಂದಃ</u>**

ನಾನು ವ್ಯವಸಾಯ ಮತ್ತು ಗೆಸ್ಟ್ ಲೆಕ್ಚರ್ ಆಗಿ ಕೆಲಸ ಮಾಡುತ್ತೇನೆ. ನಾನು ಎಂ.ಎ ಎಂ.ಫಿಲ್ ಪಿ.ಹೆಚ್.ಡಿ ಪಧವಿ ಓದಿದ್ದೇನೆ. ನನ್ನ ಪ್ರಮಾಣೀಕೃತ ಹೇಳಿಕೆಯಲ್ಲಿ ಹೇಳಿರುವ ವಿಷಯಗಳನ್ನು ನಾನೇ ಬರೆಸಿದ್ದೇನೆ. ಅದರಲ್ಲಿ ಬರೆದ ವಿಷಯಗಳೆಲ್ಲಾ ಸತ್ಯವಾಗಿರುತ್ತದೆ. ಆರೋಪಿ ನನಗೆ 2022-23 ರಿಂದ ಪರಿಚಯ. ಆರೋಪಿ ನನ್ನ ಬಾಮೈದ ಗೌತಮ್ ರವರ ಮೂಲಕ ನನಗೆ ಪರಿಚಯ. ನನಗೆ ಕೂಡ್ಲೂರು ಗ್ರಾಮದ ಸರ್ವೇ ನಂಬರ್ 78/1ರಲ್ಲಿ 4 ಎಕರೆ 29 ಗುಂಟೆ ಜಮೀನು ಇದೆ. ಆರೋಪಿ ಖಾಸಗೀ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಶಾಸ್ತ್ರ ಹೇಳುತ್ತಾರೆ ಮತ್ತು ಪೌರೋಹಿತ್ಯ ಮಾಡುತ್ತಾರೆ. ಆರೋಪಿಯ ತಂದೆಯ ಹೆಸರು ಗಂಗಾಧರ, ತಾಯಿಯ ಹೆಸರು ಗೊತ್ತಿಲ್ಲ. ಆರೋಪಿಯ ತಂದೆ ತಾಯಿಗೆ ಎಷ್ಟು ಜನ ಮಕ್ಕಳು ಎಂದು ನಾನು ತಿಳಿದುಕೊಂಡಿಲ್ಲ. ಆರೋಪಿ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಕುಡೂರಿನಲ್ಲಿ ವಾಸ ಮಾಡುತ್ತಾರೆ.

ನಿಮ್ಮ ಬಳಿ ರೂ.1,80,000/- ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯೇ ಎಂದರೆ ನಾನು ನಗದಾಗಿ ಕೊಟ್ಟಿದ್ದೇನೆ. ಹಳೆ ಸಾಲ ತೀರಿಸಲೆಂದು ಆರೋಪಿ ನನ್ನಿಂದ ರೂ.1,80,000/- ಸಾಲ ಕೇಳಿದ್ದಾರೆ. ಆರೋಪಿ ಬೆಂಗಳೂರಿನ ಮಾಗಡಿಯಲ್ಲಿ ಹಣ ಕೇಳಿದ್ದಾರೆ. ಹಣ ಕೇಳುವಾಗ ನನ್ನ ಬಾಮೈದ ಇದ್ದರು. ದಿಃ 05.06.2022ರಲ್ಲಿ ಆರೋಪಿ ನನ್ನ ಬಳಿ ಹಣ ಕೇಳಿದ್ದಾರೆ. ದಿಃ 10.06.2023ರಲ್ಲಿ ನಾನು ಹಣ ಕೊಟ್ಟಿದ್ದೇನೆ. ಒಂದೇ ಸಲ ಹಣ ಕೊಟ್ಟಿದ್ದೇನೆ. ಹಣ ತೆಗೆದುಕೊಳ್ಳುವಾಗ ಬೇರೆ ಯಾರು ಇರಲಿಲ್ಲ. ರೂ.500ರ ಮುಖಬೆಲೆಯ ಒಟ್ಟು 360 ನೋಟುಗಳನ್ನು ಆರೋಪಿಗೆ ನೀಡಿದ್ದೇನೆ. ಹಣ ಕೊಟ್ಟ ಬಗ್ಗೆ ಬಡ್ಡಿ ಮಾತುಕತೆ ಆಗಿದೆಯೇ ಎಂದರೆ ಇಲ್ಲ. ನಾನು ಎರಡು ಚೆಕ್ಕಿನ ಪ್ರಕರಣಗಳನ್ನು ದಾಖಲಿಸಿದ್ದೇನೆ. ನಾನು ಐಟಿಆರ್ ಸಲ್ಲಿಸುವುದಿಲ್ಲ. ಇನ್ನೊಂದು

ಪ್ರಕರಣವನ್ನು ರೂ. 3 ಲಕ್ಷಕ್ಕೆ ಮಂಡ್ಯದ ಬಸವರಾಜು ಎಂಬುವವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ. ನನ್ನ ಜಮೀನಿನಲ್ಲಿ ಶುಂಠಿ, ತೆಂಗು ಮತ್ತು ಅಡಿಕೆ ಬೆಳೆದಿದ್ದೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.